ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಮಂತ್ರಿಯವರೇ ಆ ಜಿಲ್ಲೆಯವರಾಗಿರುವುದರಿಂದ ೧೯೮೬-೮೭ನೇ ಸಾಲಿನ ಆಯವ್ಯಯದಲ್ಲಿ ಈ ಆಸ್ಪತ್ರೆಯನ್ನು ಈ ಪರ್ಷದಲ್ಲಿಯೇ ಸೇರಿಸುತ್ತಾರೆಯೇ ಎಂಬುದನ್ನು ನಾನು ಕೇಳಬಯಸುತ್ತೇನೆ.

ಅಧ್ಯಕ್ಷರು.—ತಾವು ಆಮೇಲೆ ಇದನ್ನು ಅವರ ಜೊತೆ ಡಿಸ್ಕಸ್ ಮಾಡಿ.

ಸಂಚಾರಿ ಚಿತ್ರಮಂದಿರಗಳಿಗೆ ಪರವಾನಗಿ

೫೧. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ವಾರ್ತಾ ಪ್ರಸಾರ ಮತ್ತು ಯುವಜನ ಸೇವಾ ರಾಜ್ಯ ಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೆ—

ಅ) ಕರ್ನಾಟಕದಲ್ಲಿರುವ ಸಂಚಾರಿ ಚಿತ್ರ ಮಂದಿರಕ್ಕೆ ಕೊಟ್ಟಿರುವ ಜಾಗಗಳಲ್ಲಿ ಆರೆ ಖಾಯಂ ಚಿತ್ರಮಂದಿರಗಳಾಗಿ ಪರಿವರ್ತಿಸಲು ಪರವಾನಗಿ ಕೊಡಲು ಸರ್ಕಾರ ಇಚ್ಛಿಸಿದೆಯೆ ;

ಆ) ಹಾಗಿದ್ದಲ್ಲಿ ಸರ್ಕಾರದವರು ಅವುಗಳನ್ನು ಖಾಯಂ ಚಿತ್ರಮಂದಿರಗಳಾಗಿ ಪರಿವರ್ತಿಸಲು ಬೇಡಿಕೆಗಳು ಬಂದಿಲ್ಲವೇ ;

ಇ) ಈ ಬಗ್ಗೆ ಸರ್ಕಾರದವರು ಯಾವ ರೀತಿ ಪರಿಹಾರ ಕೊಡಲು ತೀರ್ಮಾನಿಸಲಾಗಿದೆ ?

ಶ್ರೀ ಜೀವರಾಜ ಆಳ್ವ (ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನ ಸೇವಾ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ಬೇಡಿಕೆಗಳು ಬಂದಿವೆ.

ಇ) ಒಂದೇ ಸ್ಥಳದಲ್ಲಿ ಮೂರು ತಿಂಗಳ ಗರಿಷ್ಟ ಅವಧಿಯಲ್ಲಿ ಚಲನಚಿತ್ರ ಪ್ರದರ್ಶಿಸುವ ಚಿತ್ರ ಮಂದಿರಗಳನ್ನು ಸಂಚಾರಿ ಚಿತ್ರ ಮಂದಿರಗಳೆಂದು ಹಾಗೂ ಇನ್ನಿತರ ಸಂಚಾರಿ ಚಲನಚಿತ್ರ ಮಂದಿರಗಳನ್ನು ಆರೆ ಖಾಯಂ ಚಿತ್ರಮಂದಿರಗಳೆಂದು ಪರಿಗಣಿಸಲು ಸರ್ಕಾರ ನಿರ್ಧರಿಸಿದೆ.

ಶ್ರೀ ಆರ್. ವೆಂಕಟರಾಮಯ್ಯ —ಮಾನ್ಯ ಅಧ್ಯಕ್ಷರೆ, ಈ ಇತ್ತೀಚೆಗೆ ಸಾಮಾನ್ಯವಾಗಿ ಈ ಚಲನಚಿತ್ರಮಂದಿರಗಳು ಸಾಮೂಹಿಕ ಮನರಂಜನೆಯ ಮಾಧ್ಯಮವಾಗಿವೆ. ಇತ್ತೀಚೆಗೆ ಚಿತ್ರಮಂದಿರಗಳವರು ಮೊದಲು ಕಟ್ಟುತ್ತಿದ್ದಂತೆ ಷೆಡ್ಡುಗಳನ್ನು ಕಟ್ಟುತ್ತಿಲ್ಲ. ಒಂದೇ ಸಾರಿ ಪಕ್ಕಾ ಬಿಲ್ಡಿಂಗ್ಸ್‌ನ್ನೇ ಕಟ್ಟುತ್ತಿದ್ದಾರೆ. ಸಾಮಾನ್ಯವಾಗಿ ಈಗ ಎಲ್ಲಾ ಚಿತ್ರಮಂದಿರಗಳೂ ಹೈ ಕೋರ್ಟ್‌ನ ತಡೆಯಾಜ್ಞೆಯಲ್ಲಿಯೇ ನಡೆಯುತ್ತಿವೆ. ಆದ್ದರಿಂದ ದಯವಿಟ್ಟು ಇದನ್ನು ಖಾಯಂ ಮಾಡಿಸಿ ಈಗಿರತಕ್ಕ ಅವರ ತೊಂದರೆಯನ್ನು ತಪ್ಪಿಸುತ್ತೀರಾ ?

ಇಲ್ಲಿ ಒಂದು ಸಂತೋಷದ ಸಂಗತಿ ಎಂದರೆ, ನಾವು ಇದನ್ನು ಒಪ್ಪಿಕೊಂಡಿದ್ದೇವೆ ಎಂದು ತಾವು ಹೇಳುತ್ತಿದ್ದೀರಿ. ಆದರೆ ಇದನ್ನು ಕೇವಲ ತಾವು ಒಪ್ಪಿಕೊಂಡರೆ ಏನೂ ಪ್ರಯೋಜನವಿಲ್ಲ. ಇದಕ್ಕೆ ಯಾವಾಗ ಪರವಾನಗಿಯನ್ನು ಕೊಡುತ್ತೀರಿ. ೨-೩ ತಿಂಗಳ ಅವಕಾಶವನ್ನು ಕೊಟ್ಟು ಖಾಯಂ ಮಾಡುತ್ತೀರಾ ?

ಶ್ರೀ ಜೀವರಾಜ ಆಳ್ವ.—ನಮ್ಮ ಆಯವ್ಯಯ ಭಾಷಣದಲ್ಲಿ ಇದನ್ನು ನಾವು ಒಪ್ಪಿಕೊಂಡಿದ್ದುದರಿಂದ ಮೊನ್ನೆತಾನೆ ಇದರ ಬಗ್ಗೆ ಒಂದು ಆಜ್ಞೆಯನ್ನು ಮಾಡಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಇದರಲ್ಲಿ ತಮ್ಮ ಆಶ್ವಾಸನೆ ಇದೆ. ತಾವು ಒಂದು ಸರ್ಕಾರೀ ಆಜ್ಞೆಯನ್ನು ಹೊರಡಿಸಿ ಖಾಯಂ ಮಾಡುತ್ತೀರಾ ?

ಶ್ರೀ ಜೀವರಾಜ ಆಳ್ವ.—ಆಜ್ಞೆ ಆದ ತಕ್ಷಣ ಖಾಯಂ ಆಗಂತ್ತದೆ.